**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ .**

**<u>ಸಿ.ಸಿ ನಂಃ 504/ 2015</u>**

| | | |
|---|---|---|
| **ಸಾಕ್ಷಿಯ ಹೆಸರುಃ** | **ಕೆ.ಎನ್. ಗಿರೀಶ್** | **ಫ್ರಾಸಾಃ 31** |
| **ತಂದೆಯ ಹೆಸರುಃ** | **ಲೇಟ್ ನರಸಿಂಗಯ್ಯ** | **ಚಾಸಾಃ 20** |
| **ವಯಸ್ಸುಃ** | **45 ವರ್ಷ** | **ದಿಃ 14-05-2025** |
| **ಉದ್ಯೋಗಃ** | **ಪೊಲೀಸ್ ಮುಖ್ಯ ಪೇದೆ, ಬೆಟ್ಟದಪುರ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಪಿರಿಯಾಪಟ್ಟಣ** | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ನಾನು ದಿಃ 14.08.2014 ರಿಂದ ದಿಃ 26.06.2019 ರವರೆಗೆ ಕೆ.ಆರ್.ನಗರದ ವೃತ್ತ ನೀರಿಕ್ಷಕರ ಕಚೇರಿಯಲ್ಲಿ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುಸಿರುತ್ತೇನೆ.

ದಿಃ 01.10.2014 ರಂದು ಸಾಲಿಗ್ರಾಮ ಪೋಲಿಸ್ ಠಾಣೆಯ ಮೊಕದ್ದಮೆ ಸಂಖ್ಯೆ 192/2014 ರ ಪ್ರಕರಣವು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ 02.10.2014 ರಂದು ಚಾಸಾ-35 ರ ತನಿಖಾ ಸಹಾಯಕನಾಗಿ ನನ್ನನ್ನು ಮೌಖಿಕವಾಗಿ ನೇಮಕ ಮಾಡಿದ್ದು, ಅದರಂತೆ ಕೆ ಆರ್ ನಗರ ಸರ್ಕಾರಿ ಆಸ್ಪತ್ರೆಯಲ್ಲಿ ಕೊಲೆಯಾಗಿ ಮೃತಪಟ್ಟಿದ್ದ ಶ್ರೀಮತಿ ನಿಂಗಮ್ಮ ಕೋಂ.ಲೇಟ್ ಕೆಂಪೇಗೌಡ, 80 ವರ್ಷ, ರಾಂಪುರ ಗ್ರಾಮ ರವರ ಶವ ತನಿಖೆಯನ್ನು ಪಂಚರಾದ ಚಾಸಾ-18 ರಿಂದ ಚಾಸಾ-20 ರವರ ಸಮಕ್ಷಮದಲ್ಲಿ ಬೆಳಿಗ್ಗೆ 7.00 ಗಂಟೆಯಿಂದ 9.30 ಗಂಟೆಯವರೆಗೆ ಚಾಸಾ-35 ರ ನಿರ್ದೇಶನದಂತೆ ಮತ್ತು ಅವರು ನೀಡಿದ ಉಕ್ತ ಲೇಖನದಂತೆ ನನ್ನ ಕೈಬರಣಿಗೆಯಲ್ಲಿ ಮೃತ ನಿಂಗಮ್ಮ ರವರ ಶವ ಪಂಚನಾಮೆಯನ್ನು ಬರೆದು ಅದಕ್ಕೆ ನನ್ನ ಸಹಿಯನ್ನು ಹಾಕಿರುತೆತೇನೆ.

ನಂತರ ಅದೇ ದಿನ ಚಾಸಾ-29 ರವರ ಕಚೇರಿಗೆ ಹಾಜರುಪಡಿಸಿದ ಮೃತೆಯ ಹಸಿರು ಬಣ್ಣದ ರವಕೆ, ಆಕಾಶ ನೀಲಿ ಮತ್ತು ಕೆಂಪು ಬಣ್ಣದ ಹೂವಿನ ಚಿತ್ರವಿರುವ ಸೀರೆ ಮತ್ತು ವೈದ್ಯರು ಮೃತೆಯ ದೇಹದಿಂದ ಸಂಗ್ರಹಿಸಿದ 3 ವಿಷದ ಬಾಟಲ್ ಗಳನ್ನು ಕಚೇರಿಗೆ ಹಾಜರುಪಡಿಸಿದ್ದು, ಚಾಸಾ-35 ರ ನಿರ್ದೇಶನದಂತೆ ರಾಂಪುರ ಗ್ರಾಮದ ಚಾಸಾ-7 ಮತ್ತು ಚಾಸಾ-21 ರವರ ಸಮಕ್ಷಮದಲ್ಲಿ ಸಂಜೆ 4.30 ರಿಂದ 5.30 ಗಂಟೆಯವರೆಗೆ ಜಪ್ತಿ ಪಂಚನಾವೆಯನ್ನು ಜರುಗಿಸಿ ಬಟ್ಟೆಗಳನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ "ಪಿ" ಅಕ್ಷರದಿಂದ ಮೊಹರು ಮಾಡಲಾಯಿತು.

3 ವಿಷದ ಬಾಟಲ್ ಗಳ ಮೇಲೆ ವೈದ್ಯರು "ಹೆಚ್" ಅಕ್ಷರದಿಂದ ಮೊಹರು ಮಾಡಿರುತ್ತಾರೆ. ಸದರಿ ವಿಷದ ಬಾಟಲ್ ಗಳನು ಸಹ ಜಪ್ತಿ ಪಂಚನಾವೆಯಡಿಯಲ್ಲಿ ಜಪ್ತಿ ಪಡಿಸಿಕೊಂಡಿದ್ದು, ಜಪ್ತಿ ಪಂಚಾನಮೆಯನ್ನು ನನ್ನ ಕೈಬರಹದಲ್ಲಿ ಬರೆದು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ನ್ಯಾಯಾಲಯದಲ್ಲಿ ಇರುವ ಮುದ್ದೆ ಮಾಲು 2 ಮತ್ತು 3 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ತಾವು ಬರೆದ ಶವ ತನಿಖಾ ವರದಿಯನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಶವ ತನಿಖಾ ವರದಿಯನ್ನು ನಿಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು, ನಿಪಿ.5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಕೆ.ಸಿ. ವಕೀಲರಿಂದ</u>**

1. ನಾನು ಈ ಪ್ರಕರಣದಲ್ಲಿ ಚಾಸಾ-35 ರ ತನಿಖಾ ಸಹಾಯಕನಾಗಿ ಕೆಲಸ ಮಾಡಿರುತ್ತೇನೆ. ನಿಪಿ.5 ರ ಜಪ್ತಿ ಪಂಚನಾಮೆ ಮತ್ತು ನಿಪಿ.18 ರ ಶವ ತನಿಖಾ ವರದಿಯನ್ನು ತಯಾರಿಸಿರುವುದನ್ನು ಹೊತರುಪಡಿಸಿ ನನಗೆ ಚಾಸಾ-35 ರವರು ಈ ಪ್ರಕರಣದಲ್ಲಿ ವಹಿಸಿಕೊಟ್ಟ ಇನ್ನಿತರ ಕೆಲಸಗಳನ್ನು ನಾನು ಮಾಡಿರುತ್ತೇನೆ. ನಾನು ಈ ಪ್ರಕರಣದ ಸಾಕ್ಷಿದಾರರ ಹೇಳಿಕೆಗಳನ್ನು ಬೆರಳಚ್ಚು ಮಾಡಿರುತ್ತೇನೆ. ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನುನಿಪಿ.18 ರ ದಾಖಲೆಯನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ಮುದ್ದೆ ಮಾಲು –2 ಮತ್ತು 3 ನ್ನು ಸಹ ನನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ